MAY 2023
ವಿತ್ತ ಸಂಚಿಕೆ


# INSPIRE INDIA



ಶರಣ್ ಪಾಟೀಲ್
ಆರ್ಥಿಕ ತಜ್ಞ

## ಸಲಹೆ ನಮ್ಮದು ಹೂಡಿಕೆ ನಿಮ್ಮದು

**INSPIRE INDIA WEALTH PRIVATE LTD.** @ 65, 'Surasa Enclave' 1st floor, Puttanna Road, Gandhi Bazar
Basvanagudi, Bengaluru 560004, Ph: +91 8042129917, 9035414414. **Mail:** info@inspireindiafs.com **Website:** www.inspireindiafs.com



ಯೋಚನೆಗಳು ಯಾರೊಬ್ಬರ ಸೊತ್ತೂ ಅಲ್ಲ. ದೊಡ್ಡ ಯೋಚನೆಯನ್ನು ಮಾಡಿ, ತ್ವರಿತವಾಗಿ ಯೋಚಿಸಿ ಮತ್ತು ಎಲ್ಲರಿಗಿಂತ ಮುಂಚೂಣಿಯಲ್ಲಿರುವ ಬಗ್ಗೆ ಯೋಚಿಸಿ.

– ಧೀರೂಬಾಯಿ ಅಂಬಾನಿ




ನೀವು ಮಾಡುವ ಪ್ರತಿಯೊಂದು ಕೆಲಸವನ್ನೂ ಅತ್ಯಂತ ಇಷ್ಟದಿಂದ, ನಿಮ್ಮ ಇಡೀ ಜೀವನಕ್ಕೆ ಮಾಡುತ್ತಿರುವಂತೆ ಕಾರ್ಯನಿರ್ವಹಿಸಿ. ಪ್ರಾಬಲ್ಯವನ್ನು ಸಾಧಿಸಿ.

–ಮೇರಿ ತೆರೆಸಾ ಬರಾ



ಕಲಿಕೆ ಎನ್ನುವುದು ನನಗೆ ಅತ್ಯಂತ ಇಷ್ಟದ್ದು. ಹೊಸ ಸಂಗತಿಗಳೆಂದರೆ ಕುತೂಹಲಕ್ಕೆ ಒಳಗಾಗುತ್ತೇನೆ. ನಾನು ಓದಿದ್ದಕ್ಕಿಂತ ಹೆಚ್ಚು ಪುಸ್ತಕಗಳನ್ನು ನಾನು ಖರೀದಿಸಿದ್ದೇನೆ.

–ಸತ್ಯ ನದೆಲ್ಲಾ.




# ಯಾಕೆ ಜಗ್ಗುತ್ತಿದೆ ಸಂಪತ್ತಿನ ಪಟ್ಟಿ?

ಪ್ರತಿ ಬಾರಿ ಭಾರತೀಯ ಮಾರುಕಟ್ಟೆ ಅಥವಾ ಒಂದು ನಿರ್ದಿಷ್ಟ ಷೇರು ಅಥವಾ ವಲಯ ಹೊಸ ಮೈಲುಗಲ್ಲನ್ನು ತಲುಪಿದಾಗ ಹೊಸದೊಂದು ನೋಟಿಫಿಕೇಶನ್ ನಮ್ಮ ಮೊಬೈಲ್‌ನಲ್ಲಿ ಬಂದು ಬೀಳುತ್ತದೆ. ನಮ್ಮ ದೇಶದಲ್ಲಿ ಸಾಕಷ್ಟು ಆರ್ಥಿಕ ಬೆಳವಣಿಗೆಗಳು ನಡೆಯುತ್ತಿರುವ ಬಗ್ಗೆ ಮತ್ತು ಸ್ಟಾರ್ಟ್‌ಅಪ್‌ಗಳ ಮೂಲಕ ಹೊಸ ಆವಿಷ್ಕಾರಗಳು ಕೈಗೊಳ್ಳುತ್ತಿರುವ ಬಗ್ಗೆಯೂ ನಾವು ಕೇಳುತ್ತಿದ್ದೇವೆ. ಇಂತಹ ಬೆಳವಣಿಗೆಗಳಿಂದ ನಮಗೆ ಅಧಿಕ ಲಾಭ ಗಳಿಸಲು ಸಹಾಯವಾಗುತ್ತದೆ ಎಂದು ನಂಬಿರುತ್ತೇವೆ. ಆದರೆ ನಮ್ಮ ಬಂಡವಾಳ ಪಟ್ಟಿಯಲ್ಲಿನ ಆದಾಯವನ್ನು ಗಮನಿಸಿದಾಗ ಕೆಲ ಅಂಶಗಳು ನಮ್ಮ ಬಂಡವಾಳ ಪಟ್ಟಿಯನ್ನು ಹಿಂದಕ್ಕೆ ಎಳೆಯುತ್ತಿರುವುದು ಮನವರಿಕೆಯಾಗುತ್ತದೆ. ಕೆಲವೊಮ್ಮೆ ಈ ಆದಾಯ ನಾವು ನಿರೀಕ್ಷೆ ಮಾಡಿದ್ದಕ್ಕಿಂತ ಅತ್ಯಂತ ಕಡಿಮೆ ಪ್ರಮಾಣದಲ್ಲಿರುತ್ತದೆ. ಅದಕ್ಕೆ ಕಾರಣಗಳು ಅನೇಕ ಇರಬಹುದು. ಇಂತಹ ಕಾರಣಗಳು ಏನು ಎಂಬುದನ್ನು ಒಂದೊಂದಾಗಿ ಅರ್ಥಮಾಡಿಕೊಳ್ಳೋಣ:

1. **ಅಸಮರ್ಪಕ ಆಸ್ತಿ ಹಂಚಿಕೆ:** ನಿಮ್ಮ ಒಟ್ಟಾರೆ ಬಂಡಾವಳ ಪಟ್ಟಿಯ ನಿರ್ವಹಣೆಯಲ್ಲಿ ಆಸ್ತಿಗಳನ್ನು ಯಾವುದಕ್ಕೆಲ್ಲ ಹಂಚಿಕೆ ಮಾಡಿದ್ದೀರಿ ಎಂಬುದು ಮುಖ್ಯವಾಗುತ್ತದೆ. ಒಂದೇ ಒಂದು ಸೆಕ್ಯುರಿಟಿ ಅಥವಾ ಆಸ್ತಿಗೆ ಕಡಿಮೆ ಅಥವಾ ಅತಿಯಾದ ಅವಕಾಶವನ್ನು ನೀಡಿದ್ದರೂ ಕೂಡ ಪರಿಣಾಮ ಉಂಟಾಗಬಹುದು. ಕಾಲಕ್ಕೆ ತಕ್ಕಂತೆ ನಿಮ್ಮ ಬಂಡಾವಳ ಪಟ್ಟಿಯನ್ನು ಹಂಚಿಕೆ ಮಾಡುವುದರಿಂದ ಅದರ ಒಟ್ಟಾರೆ ನಿರ್ವಹಣೆಯ ಮೇಲೆ ಪರಿಣಾಮ ಬೀರುವುದು ಮಾತ್ರ ನಿಶ್ಚಿತ. ಯಾಕೆಂದರೆ ಭಿನ್ನ ಭಿನ್ನ ಆಸ್ತಿ ವರ್ಗಗಳು ಭಿನ್ನ ಭಿನ್ನವಾದ ರಿಸ್ಕ್‌ಗೆ ತೆರೆದುಕೊಳ್ಳುತ್ತವೆ. ಕಡಿಮೆ ಹಂಚಿಕೆಯ ಮೂಲಕ ಅಧಿಕ ಆದಾಯವನ್ನು ಸಾಧಿಸುವುದು ನಿಜಕ್ಕೂ ಸವಾಲಿನ ಕೆಲಸವಾಗುತ್ತದೆ. ನಿಮ್ಮ ಹೂಡಿಕೆಯ ಅವಧಿಯಲ್ಲಿ ಅವಕಾಶ ಸಿಕ್ಕಾಗಲೆಲ್ಲ ಬಂಡವಾಳ ಪಟ್ಟಿಯ ಆಸ್ತಿ ಹಂಚಿಕೆಯ ಮೇಲ್ವಿಚಾರಣೆ ನಡೆಸುವುದು ಸೂಕ್ತ.
2. **ಉತ್ಪನ್ನಗಳ ತಪ್ಪು ಆಯ್ಕೆ:** ಉತ್ತಮ ಫಲಿತಾಂಶಗಳನ್ನು ಪಡೆಯಲು ನಿಮಗೆ ಸೂಕ್ತವಾದ ಉತ್ಪನ್ನದ ಆಯ್ಕೆ ಮಾಡುವುದು ಮುಖ್ಯ. ಇದರಲ್ಲಿ ಆ ಉತ್ಪನ್ನದ ಸ್ಥಿರತೆಯೂ ಕೂಡ ಸೇರಿದೆ. ಒಂದು ವೇಳೆ ನಿಮ್ಮ ಬಂಡವಾಳ ಪಟ್ಟಿಗೆ ಒಂದು ಉತ್ಪನ್ನವನ್ನು ನೀವು ಇಷ್ಟದ್ದು ಎಂಬ ಕಾರಣಕ್ಕೆ ಬಲವಂತದಿಂದ ಸೇರಿಸಿದರೆ ಆಗ ಸಿಗುವ ಫಲಿತಾಂಶ ಪೂರಕವಾಗಿರುವುದಿಲ್ಲ. ಉದಾಹರಣೆಗೆ, ಗ್ಯಾರೆಂಟಿಯಾಗಿರುವ ಪ್ಲಾನ್‌ಗಳಲ್ಲಿ ನೀವು ಅತ್ಯಧಿಕ ಹೂಡಿಕೆಯನ್ನು ಮಾಡಿರುತ್ತೀರಿ ಮತ್ತು ಆ ನಿರ್ದಿಷ್ಟ ಹೂಡಿಕೆಗೆ ನಿಗದಿ ಮಾಡಿರುವ ಕಾಲಮಿತಿ 15ರಿಂದ

ಒಳ ಪುಟ ನೋಟ

ಅಪ್ಪಟ ಚಿನ್ನದ ಗೋಲ್ಡ್ ಬಾಂಡ್ 3



ಅಪಘಾತ ವಿಮೆ: ಹೀಗಿರಲಿ ಪಾಲಿಸಿ 5



20 ವರ್ಷಗಳಾಗಿರುತ್ತದೆ. ಆಗ ನೀವು ಸುದೀರ್ಘಾವಧಿಯಲ್ಲಿ ಕಡಿಮೆ ಹಣದುಬ್ಬರದೊಂದಿಗೆ ಹೊಂದಾಣಿಕೆ ಮಾಡಿಕೊಂಡ ಆದಾಯವನ್ನು ಗಳಿಸಬೇಕಾಗಬಹುದು.

3. **ಆಗಾಗ ಖರೀದಿ/ಮಾರಾಟ ವಹಿವಾಟು:** ಯಾವುದೇ ಆಸ್ತಿ ವರ್ಗಕ್ಕೆ ನಿರ್ವಹಣೆಯನ್ನು ತೋರಲು ಒಂದು ನಿರ್ದಿಷ್ಟ ಸಮಯದ ಅಗತ್ಯವಿರುತ್ತದೆ. ತಕ್ಷಣಕ್ಕೆ ಅಪಾರವಾದ ಲಾಭವನ್ನು ಗಳಿಸಲು ಆಗಾಗ ಖರೀದಿ/ಮಾರಾಟದ ಪ್ರಯತ್ನಗಳನ್ನು ಮಾಡಬಹುದು. ಆಗ ನೀವು




ಬಹುಬೇಗ ಲಾಭ ಗಳಿಸಲು ಸಾಧ್ಯವಾಗಬಹುದು. ಈ ರೀತಿ ಆಗಾಗ ವಹಿವಾಟುಗಳನ್ನು ಮಾಡುವುದರಿಂದ ಅಧಿಕ ರಿಸ್ಕ್ ಮತ್ತು ವೆಚ್ಚಕ್ಕೆ ದಾರಿ ಮಾಡಿಕೊಡುವುದು ಮಾತ್ರವಲ್ಲದೆ ಹೆಚ್ಚು ತೆರಿಗೆ ಭಾದ್ಯತೆಯನ್ನೂ ಭರಿಸಬೇಕಾಗಬಹುದು. ಸಾಮಾನ್ಯವಾಗಿ ಒಂದು ಆಸ್ತಿ ವರ್ಗ ಅಥವಾ ಉತ್ಪನ್ನಕ್ಕೆ ಅದರ ಹೂಡಿಕೆ ವ್ಯಾಪ್ತಿಗೆ ಅನುಗುಣವಾಗಿ ನಿರ್ವಹಣೆ ತೋರಲು ನಿರ್ದಿಷ್ಟ ಸಮಯವನ್ನು ನೀಡಬೇಕಾಗುತ್ತದೆ.

4. **ಏಕಾಗ್ರತೆಯ ಬಂಡವಾಳ ಪಟ್ಟಿ:** ಎಲ್ಲಾ ಮೊಟ್ಟೆಗಳನ್ನೂ ಒಂದೇ ಬುಟ್ಟಿಯಲ್ಲಿ ಹಾಕಬಾರದು, ಅದರಿಂದ ನಿಮ್ಮ ಬಂಡವಾಳ ಪಟ್ಟಿ ಹೆಚ್ಚು ರಿಸ್ಕ್‌ಗೆ ಒಳಗಾಗುತ್ತದೆ ಎಂಬ ಮಾತನ್ನು ನೀವು ಕೇಳಿರಬಹುದು. ಒಂದು ಬಂಡವಾಳ ಪಟ್ಟಿಯಲ್ಲಿ ಅತಿಯಾದ ಏಕಾಗ್ರತೆಯನ್ನು ಹೊಂದದೇ ಇರುವಂತೆ ಈ ಮೂಲಕ ಸಲಹೆ ಮಾಡಲಾಗುತ್ತದೆ. ಒಂದೇ ವಲಯ ಅಥವಾ ಸೆಕ್ಯುರಿಟಿಗೆ ಅಧಿಕ ಹಂಚಿಕೆಯನ್ನು ಮಾಡುವುದರಿಂದ ಮಾರುಕಟ್ಟೆಯಲ್ಲಿ ಕುಸಿತ ಉಂಟಾದರೆ ನಿಮ್ಮ ಬಂಡವಾಳ ಪಟ್ಟಿಯ ಮೇಲೂ ಹೊಡೆತ ಬೀಳುತ್ತದೆ. ಎಲ್ಲಕ್ಕಿಂತ ಹೆಚ್ಚಾಗಿ ನೀವು ಲಿಕ್ವಿಡಿಟಿ ರಿಸ್ಕ್‌ಗೆ ಒಳಗಾಗುತ್ತೀರಿ. ಹಾಗಾಗಿ ಸೂಕ್ತವಾದ ರೀತಿಯಲ್ಲಿ ಆಸ್ತಿಗಳ ವರ್ಗೀಕರಣ ಮಾಡಿದರೆ ಬಂಡವಾಳ ಪಟ್ಟಿಯ ಮೇಲೆ ಬೀಳುವ ಅಧಿಕ ಒತ್ತಡವನ್ನು ತಡೆಯಬಹುದು. ಹಾಗಂತ ಅಗತ್ಯಕ್ಕಿಂತ ಹೆಚ್ಚು ಆಸ್ತಿ ವರ್ಗೀಕರಣ ಮಾಡುವುದು ಸೂಕ್ತವಲ್ಲ. ಅದರಿಂದ ನಿಮ್ಮ ಬಂಡವಾಳ ಪಟ್ಟಿಯು ಕಡಿಮೆ ನಿರ್ವಹಣೆಯ ಮತ್ತು ರಿಸ್ಕ್ ಇರುವ ಆಸ್ತಿಗಳು/ಹೂಡಿಕೆಗಳ ಕಡೆಗೆ ತೆರೆದುಕೊಳ್ಳಬಹುದು.

5. **ಪರಾಮರ್ಶೆಯ ಕೊರತೆ:** ನಿಮ್ಮ ಬಂಡವಾಳ ಪಟ್ಟಿಯನ್ನು ಮತ್ತು ಹೂಡಿಕೆ ಯೋಜನೆಗಳನ್ನು ಆಗಾಗ ಪರಾಮರ್ಶೆಗೆ ಒಳಪಡಿಸಬೇಕಾಗುತ್ತದೆ. ಕಾಲಕ್ಕೆ ತಕ್ಕಂತೆ ನಿಮ್ಮ ಹಣಕಾಸು ಪರಿಸ್ಥಿತಿಗಳು, ಕೌಟುಂಬಿಕ ಅಗತ್ಯಗಳು, ಜೀವನ ಕ್ರಮಗಳು ಮತ್ತು ಅಗತ್ಯ-ಆಕಾಂಕ್ಷೆಗಳು ಬದಲಾಗುತ್ತವೆ. ಇದ್ದಕ್ಕಿದ್ದಂತೆ ಮಾರುಕಟ್ಟೆಯಲ್ಲಿ ಹೂಡಿಕೆಗೆ ಅಥವಾ ಲಾಭವನ್ನು ಬುಕ್ ಮಾಡಲು ಅಪಾರವಾದ ಅವಕಾಶಗಳು ಹುಟ್ಟಿಕೊಳ್ಳಬಹುದು. ಹಾಗಾಗಿ ಕಾಲಕಾಲಕ್ಕೆ ಅಥವಾ ಅಗತ್ಯ/ಘಟನೆ ಆಧಾರಿತವಾಗಿ ನಿಮ್ಮ ಬಂಡವಾಳ ಪಟ್ಟಿಯ ಪರಾಮರ್ಶೆ ನಡೆಸದೇ ಇದ್ದರೆ ಅದು ಕಳಪೆ ನಿರ್ವಹಣೆ ತೋರುತ್ತಿರಬಹುದು. ಪರಾಮರ್ಶೆ ಮಾಡದೇ ಹೋದರೆ ನಿಮ್ಮ ಉದ್ದೇಶಿತ ಆಸ್ತಿ ಹಂಚಿಕೆ ಏಕಾಗ್ರತೆಯನ್ನು ಕಳೆದುಕೊಳ್ಳಬಹುದು ಮತ್ತು ಲಾಭ ಗಳಿಸುವ ಚಟುವಟಿಕೆಗಳನ್ನು ತಪ್ಪಿಸಿಕೊಳ್ಳಬಹುದು.

6. **ಸಕಾಲ ಎಂಬ ಮಿಥ್ಯೆ:** ಮಾರುಕಟ್ಟೆಯಲ್ಲಿ ಸೂಕ್ತ ಸಮಯ ಉಂಟಾಗಲಿ ಎಂಬುದು ಪ್ರತಿಯೊಬ್ಬ ಹೂಡಿಕೆದಾರನ ಪ್ರವೃತ್ತಿ. ಬಹುತೇಕ ಹೂಡಿಕೆದಾರರು ಹೂಡಿಕೆಯನ್ನು ಮಾಡಲು ಮಾರುಕಟ್ಟೆಯಲ್ಲಿ ಕುಸಿತ ಉಂಟಾಗಲಿ ಎಂದು ಕಾಯುತ್ತಾರೆ. ಇದರಿಂದಾಗಿ ಮಾರುಕಟ್ಟೆಯಲ್ಲಿ ಉಂಟಾಗಿರುವ ಸೂಕ್ತವಾದ ಕಾಲ ಮತ್ತು ಅದರಿಂದ ಗಳಿಸಬಹುದಾದ ಲಾಭದ ಅವಕಾಶವನ್ನು ಕಳೆದುಕೊಳ್ಳುತ್ತಾರೆ. ಮಾರುಕಟ್ಟೆಯ ಮೌಲ್ಯ ಬಹಳ ಪರಿಣಾಮ ಬೀರುತ್ತದೆ ಎಂಬುದು ನಿಜವಾದರೂ ಮಾರುಕಟ್ಟೆಯ ಸಮಯಕ್ಕೇ ಹೂಡಿಕೆ ಮಾಡುತ್ತೇನೆ ಎಂದು ಕಾಯುವುದು ಕಷ್ಟ. ನಮ್ಮ ಗಮನ ಯಾವತ್ತಿದ್ದರೂ ಹೂಡಿಕೆಯ ಅವಧಿ ಯಾವುದು ಎಂಬುದರ ಮೇಲೆ ಇರಬೇಕು. ಬದಲಾಗಿ ಮಾರುಕಟ್ಟೆಯ ಸಮಯದ ಮೇಲೆ ಅಲ್ಲ. ಮಾರುಕಟ್ಟೆಯಲ್ಲಿ ಸೂಕ್ತ ಸಮಯ ಬರಲಿ ಎಂದು ಕಾದು ಕುಳಿತುಕೊಳ್ಳುವ ಕಾರ್ಯತಂತ್ರ ಸುದೀರ್ಘಾವಧಿಯಲ್ಲಿ ನಿಮ್ಮ ಬಂಡವಾಳ ಪಟ್ಟಿಯಲ್ಲಿ ಮಾಡುವ ಪರಿಣಾಮ ಅತ್ಯಂತ ಕಡಿಮೆ ಎಂಬುದು ಅನೇಕ ಅಧ್ಯಯನಗಳಿಂದ ಸಾಬೀತಾಗಿದೆ.

7. **ಅಕಾರಣವಾದ ನಿರೀಕ್ಷೆಗಳು:** ಮೊದಲ ಬಾರಿ ಮಾರುಕಟ್ಟೆಗೆ ಪ್ರವೇಶ ಮಾಡುವವರು ಸಾಮಾನ್ಯವಾಗಿ ಗೂಳಿಯ ಓಟ ಜೋರಾಗಿದ್ದಾಗ ಅಥವಾ ಗೂಳಿಯ ಓಟ ಇನ್ನೇನು ಕೊನೆಯಾಗುತ್ತದೆ ಎಂಬ ಹಂತದಲ್ಲಿ ಈ ಕಾರ್ಯವನ್ನು ಮಾಡುತ್ತಾರೆ. ಅಲ್ಪಾವಧಿಯಲ್ಲಿ ಜನ ಭಾರೀ ಆದಾಯಗಳನ್ನು ಗಳಿಸಿದ್ದು ಅವರ ನಿರ್ಧಾರಕ್ಕೆ ಆಧಾರವಾಗಿರುತ್ತದೆ. ಮಾರುಕಟ್ಟೆ ಮತ್ತು ಈಕ್ವಿಟಿ ಹೂಡಿಕೆ ಹೇಗೆ ಕಾರ್ಯನಿರ್ವಹಿಸುತ್ತದೆ ಎಂಬುದನ್ನು ಅರ್ಥ ಮಾಡಿಕೊಳ್ಳದೇ ಮಾರುಕಟ್ಟೆ ಯಾವತ್ತೂ ಮೇಲ್ಮುಖದಲ್ಲಿ ಚಲಿಸಿ ಸಾಕಷ್ಟು ಆದಾಯವನ್ನು ಗಳಿಸುತ್ತದೆ ಎಂಬ ನಿರೀಕ್ಷೆಯಲ್ಲಿರುತ್ತಾರೆ. ಆದರೆ ಅಲ್ಪಾವಧಿಯಲ್ಲಿ ನಿರೀಕ್ಷಿತ ಆದಾಯ ಬಾರದೇ ಇದ್ದಾಗ ಅಕಾರಣವಾಗಿ ನಿಮ್ಮ ಬಂಡವಾಳ ಪಟ್ಟಿ ಸರಿಯಾಗಿ ಕಾರ್ಯನಿರ್ವಹಣೆ ಮಾಡಿಲ್ಲ ಎಂಬ ಅಭಿಪ್ರಾಯಕ್ಕೆ ಒಳಗಾಗುತ್ತೀರಿ.

**ಕೊನೆಯ ಮಾತು:** ಯಾವುದೇ ಹೂಡಿಕೆಯ ಪಯಣದಲ್ಲಿ ನಿಮ್ಮ ಬಂಡವಾಳ ಪಟ್ಟಿಯಲ್ಲಿರುವ ಆಸ್ತಿಯ ಹಂಚಿಕೆ ಭರಪೂರವಾಗಿದ್ದು ನಿಮ್ಮ ರಿಸ್ಕ್ ಪ್ರೊಫೈಲ್ ಮತ್ತು ನಿರೀಕ್ಷೆಗಳಿಗೆ ತಕ್ಕುನಾಗಿರಬೇಕು ಎಂಬುದು ಮುಖ್ಯ. ಅದಾದ ಬಳಿಕ ಇದನ್ನು ಆಗಿಂದಾಗ್ಗೆ ಪರಾಮರ್ಶೆ ನಡೆಸುತ್ತಿರಬೇಕು ಮತ್ತು ಅದಕ್ಕೆ ತಕ್ಕಂತೆ ಬದಲಾವಣೆಗಳನ್ನು ಮಾಡುತ್ತಿರಬೇಕು. ಸರಿಯಾದ ನಿರೀಕ್ಷೆ ಮತ್ತು ಹಣಕಾಸು ನಡವಳಿಕೆಗಳು ಕೂಡ ನಿಮ್ಮ ತೃಪ್ತಿಯ ಮಟ್ಟದ ಮೇಲೆ ಪರಿಣಾಮ ಬೀರಬಹುದು. ಇವೆಲ್ಲವನ್ನೂ ನಿರಂತರವಾಗಿ ನಡೆಸುವ ಸಮಯ, ಜ್ಞಾನ ಅಥವಾ ಸಾಮರ್ಥ್ಯ ನಮಗೆ ಇಲ್ಲದೇ ಇರಬಹುದು. ಇಂತಹ ಸಂದರ್ಭದಲ್ಲಿ ಮ್ಯುಚ್ಯುಯಲ್ ಫಂಡ್ ವಿತರಕರು ತಮ್ಮ ಪಾತ್ರವನ್ನು ನಿರ್ವಹಿಸುವುದು ಮುಖ್ಯವಾಗುತ್ತದೆ. ನಿಮ್ಮ ಬಂಡವಾಳ ಪಟ್ಟಿ ಮತ್ತು ಅಗತ್ಯಗಳಿಗೆ ತಕ್ಕಂತೆ ಅವರು ಹೊಂದಾಣಿಕೆ ಮಾಡುತ್ತಾರೆ. ಎಲ್ಲಕ್ಕಿಂತ ಮುಖ್ಯವಾಗಿ ನಿಮ್ಮ ಬಂಡವಾಳ ಪಟ್ಟಿ ನಿಮ್ಮ ನಿರೀಕ್ಷೆಗೆ ತಕ್ಕುನಾಗಿ ನಡೆಯುತ್ತಿರುತ್ತದೆ.

**ಇವತ್ತಿಗೂ ಚಿನ್ನ ಹೂಡಿಕೆ ಮಾಡಲು ಅತ್ಯಂತ ಮಹತ್ವದ ಆಸ್ತಿ ವರ್ಗವಾಗಿ ಮುಂದುವರಿದಿದೆ. ಈಗ ನಮ್ಮ ಮುಂದೆ ಭೌತಿಕ ಚಿನ್ನ ಮಾತ್ರವಲ್ಲದೆ ಡಿಜಿಟಲ್ ಗೋಲ್ಡ್‌ನಲ್ಲಿ ಹೂಡಿಕೆ ಮಾಡುವ ಆಯ್ಕೆ ಕೂಡ ಇದೆ.**




# ಅಪ್ಪಟ ಚಿನ್ನದ GOLD BOND

ಭಾರತೀಯರಿಗೆ ಚಿನ್ನದ ಮೇಲೆ ಮೋಹ ಹೆಚ್ಚು. ವಿಶ್ವದಲ್ಲಿಯೇ ಶೇ.9ರಿಂದ 11ರಷ್ಟು ಮಂದಿ ಭಾರತೀಯರು ಭೌತಿಕ ರೂಪದ ಚಿನ್ನವನ್ನು ಹೊಂದಿರುತ್ತಾರೆ ಎಂದು ಅಂದಾಜು ಮಾಡಲಾಗಿದೆ. ಶೇ.75ಕ್ಕೂ ಅಧಿಕ ಭಾರತೀಯರ ಮನೆಗಳಲ್ಲಿ ಒಂದಲ್ಲ ಒಂದು ರೂಪದಲ್ಲಿ ಚಿನ್ನವಿರುತ್ತದೆ. ಜಾಗತಿಕವಾಗಿ ಲೆಕ್ಕ ಹಾಕುವುದಾದರೆ ಭಾರತದಲ್ಲಿ ಚಿನ್ನದ ಗ್ರಾಹಕರ ಸಂಖ್ಯೆಯೂ ಅಗ್ರ ಸ್ಥಾನದಲ್ಲಿದೆ. ನಮ್ಮಲ್ಲಿ ಬಹುತೇಕರಿಗೆ ಚಿನ್ನ ಎಂಬುದು ನಮ್ಮ ಸಂಸ್ಕೃತಿಯ ಭಾಗವೇ ಆಗಿಹೋಗಿದೆ. ಕಷ್ಟದ ಕಾಲದಲ್ಲಿ ಬಳಕೆ ಮಾಡಬಹುದಾದ ಉತ್ತಮ ಆಸ್ತಿ ಎಂದರೆ ಚಿನ್ನ ಎಂಬ ನಂಬಿಕೆ ನಮ್ಮ ಅನಾದಿ ಕಾಲದಿಂದಲೂ ಇರುವುದರಿಂದ ನಾವು ಆಗಾಗ ಚಿನ್ನ ಖರೀದಿ ಮಾಡುವುದನ್ನು ನಮ್ಮ ಅಭ್ಯಾಸವಾಗಿ ಮಾಡಿಕೊಂಡಿದ್ದೇವೆ. ನಮ್ಮಲ್ಲಿ ಯಾವುದೇ ಅಧಿಕೃತ ಹೂಡಿಕೆ ಅಥವಾ ಉಳಿತಾಯದ ಮಾರ್ಗಗಳು ಇಲ್ಲದೇ ಇದ್ದ ಕಾಲದಲ್ಲಿ ನಮ್ಮ ಪೂರ್ವಜರು ಚಿನ್ನದಲ್ಲಿ ಹಣವನ್ನು ಹೂಡಿಕೆ ಮತ್ತು ಉಳಿತಾಯ ಮಾಡಲು ಆರಂಭಿಸಿದರು.

ಇವತ್ತಿಗೂ ಚಿನ್ನ ಹೂಡಿಕೆ ಮಾಡಲು ಅತ್ಯಂತ ಮಹತ್ವದ ಆಸ್ತಿ ವರ್ಗವಾಗಿ ಮುಂದುವರಿದಿದೆ. ಈಗ ನಮ್ಮ ಮುಂದೆ ಭೌತಿಕ ಚಿನ್ನ ಮಾತ್ರವಲ್ಲದೆ ಡಿಜಿಟಲ್ ಗೋಲ್ಡ್‌ನಲ್ಲಿ ಹೂಡಿಕೆ ಮಾಡುವ ಆಯ್ಕೆ ಕೂಡ ಇದೆ. ಇದರಿಂದ ಚಿನ್ನದ ಭದ್ರತೆ, ಸಂಗ್ರಹ, ಪರಿಶುದ್ಧತೆ, ತಯಾರಿಕೆ ವೆಚ್ಚಗಳು ಇನ್ನಿತರ ಅನೇಕ ವೆಚ್ಚಗಳ ಉಳಿತಾಯ ಕೂಡ ಆಗಿದೆ. ಡಿಜಿಟಲ್ ರೂಪದಲ್ಲಿ ಚಿನ್ನ ಖರೀದಿ ಮಾಡಲು ಇರುವ ಆಯ್ಕೆಗಳೆಂದರೆ ಸವರಿನ್ ಗೋಲ್ಡ್ ಬಾಂಡ್‌ಗಳು (ಎಸ್‌ಜಿಬಿ), ಮತ್ತು ಚಿನ್ನದ ಇಟಿಎಫ್‌ಗಳು. ಆದರೆ, ಎಸ್‌ಜಿಬಿಗಳಲ್ಲಿ ಹೂಡಿಕೆ ಮಾಡುವುದರಿಂದ ಗಣನೀಯ ಪ್ರಮಾಣದ ಏರಿಕೆಯಾಗಿರುವುದು ಕಂಡುಬಂದಿದೆ. ಯಾಕೆಂದರೆ ಇದು ನೈಜ ಚಿನ್ನಕ್ಕೆ ಸೂಕ್ತ ಪರ್ಯಾಯವಾಗಿದೆ ಹಾಗೂ ಸರ್ಕಾರ ಕೂಡ ಇದಕ್ಕೆ ಹೆಚ್ಚಿನ ಪ್ರೋತ್ಸಾಹವನ್ನು ನೀಡುತ್ತಿದೆ. ನಾವು ಈ ಲೇಖನದಲ್ಲಿ ಎಸ್‌ಜಿಬಿಯಂತಹ ಹೊಸ ಯುಗದ ಚಿನ್ನದ ಹೂಡಿಕೆ ಉತ್ಪನ್ನದ ಬಗ್ಗೆ ವಿವರವಾಗಿ ಪರಿಚಯ ಮಾಡುತ್ತಿದ್ದೇವೆ.

ಎಸ್‌ಜಿಬಿಗಳೆಂದರೆ ಯಾವುದು?

ಭೌತಿಕ ಚಿನ್ನಕ್ಕೆ ಬೇಡಿಕೆಯನ್ನು ಕಡಿಮೆ ಮಾಡಲು ಮತ್ತು ಚಿನ್ನಕ್ಕಾಗಿ ಮಾಡುವ ದೇಶೀಯ ಉಳಿತಾಯದ ಒಂದು ಭಾಗವನ್ನು ಹಣಕಾಸು ಮಾರುಕಟ್ಟೆಯಾಗಿ ಬದಲಿಸಲು ಸರ್ಕಾರ 2015ರ ನವೆಂಬರ್ ತಿಂಗಳಿನಲ್ಲಿ ಆರಂಭಿಸಿದ ಯೋಜನೆಯೇ ಸವರಿನ್ ಗೋಲ್ಡ್ ಬಾಂಡ್ (ಎಸ್‌ಜಿಬಿ). ಇದು ಕೇಂದ್ರ ಸರ್ಕಾರದ ಪರವಾಗಿ ಆರ್‌ಬಿಐ ಭಾರತೀಯ ನಿವಾಸಿಗಳಿಗೆ ಹೊರಡಿಸಿದ ಸೆಕ್ಯುರಿಟಿಯಾದ್ದರಿಂದ ಸುರಕ್ಷಿತ ಎಂದು ಪರಿಗಣಿಸಲಾಗಿದೆ. ಇವುಗಳ ಮೌಲ್ಯವನ್ನು ಚಿನ್ನ ಗ್ರಾಮ್‌ಗಳ ಲೆಕ್ಕದಲ್ಲಿ ದುಪ್ಪಟ್ಟಾಗುವ ಕ್ರಮದಲ್ಲಿ ಪರಿಗಣಿಸಲಾಗುತ್ತದೆ. ಇದು ಸ್ಟಾಕ್ ಎಕ್ಸ್‌ಚೇಂಜ್‌ನಲ್ಲಿ ವ್ಯವಹರಿಸಲಾಗುವ ಸುದೀರ್ಘಾವಧಿ ರೂಪದ ಮಾರುಕಟ್ಟೆ ಸಾಧನ. ಈ ಪ್ರಕ್ರಿಯೆಯಲ್ಲಿ ಹೂಡಿಕೆದಾರರು ನಗದು ರೂಪದಲ್ಲಿ ಇಶ್ಯೂ ಪ್ರೈಜ್‌ನ್ನು ಪಾವತಿ ಮಾಡಬೇಕು ಮತ್ತು ಮೆಚ್ಯುರಿಟಿಯಾದಾಗ ಬಾಂಡ್‌ಗಳನ್ನು ನಗದು ರೂಪದಲ್ಲಿ ಪಡೆದುಕೊಳ್ಳಬಹುದು. ಅಂದರೆ ಮೆಚ್ಯುರಿಟಿಯಾದಾಗಲೂ ಭೌತಿಕ ರೂಪದ ಚಿನ್ನ ನಿಮಗೆ ದಕ್ಕುವುದಿಲ್ಲ.

ಪ್ರತಿ ವರ್ಷ ಆರ್‌ಬಿಐ ಉತ್ಪನ್ನಗಳ ರೂಪದಲ್ಲಿ ಸೀಮಿತ ಅವಧಿಗಾಗಿ

ಎಸ್‌ಜಿಬಿಗಳನ್ನು ಬಿಡುಗಡೆ ಮಾಡುತ್ತದೆ. ಈ ಸಂದರ್ಭದಲ್ಲಿ ಹೊಸ ಖರೀದಿದಾರರು ಎಸ್‌ಜಿಬಿಗಳನ್ನು ಖರೀದಿ ಮಾಡಬಹುದು. ಉದಾಹರಣೆಗೆ 2022–23ರ ಸವರಿನ್ ಗೋಲ್ಡ್ ಬಾಂಡ್ ಯೋಜನೆ– ಸರಣಿ ಖಗನ್ನು (ಉತ್ಪನ್ನ) ಸರ್ಕಾರ ಇತ್ತೀಚೆಗಷ್ಟೇ ಆರಂಭಿಸಿತು. ಅಂದರೆ ಮಾರ್ಚ್ ಆರಕ್ಕೆ ಆರಂಭವಾಗಿ ಮಾರ್ಚ್ 10ಕ್ಕೆ ಮುಕ್ತಾಯಗೊಂಡಿತು. ಕಳೆದ ಹಣಕಾಸು ವರ್ಷಕ್ಕೆ ಇದು ಎಸ್‌ಜಿಬಿಗಳ ಕೊನೆಯ ಬ್ಯಾಚ್ ಆಗಿತ್ತು. ಆರ್‌ಬಿಐ ಒಂದು ಗ್ರಾಮ್ ಚಿನ್ನದ ಇಶ್ಯೂ ಬೆಲೆಯನ್ನು ರೂ.5611 ಎಂದು ನಿಗದಿ ಮಾಡಿತ್ತು. ಈಗ ನಾವು ಎಸ್‌ಜಿಬಿಗಳ ಕೆಲವು ಮೂಲಭೂತ ಅಂಶಗಳನ್ನು ತಿಳಿದುಕೊಳ್ಳೋಣ.

**ಪ್ರಮಾಣ:** ಬಾಂಡ್‌ಗಳನ್ನು ಒಂದು ಗ್ರಾಮ್ ಚಿನ್ನದ ರೂಪದಲ್ಲಿ ನೀಡಲಾಗುತ್ತದೆ ಮತ್ತು ಅದರಿಂದ ಗುಣಿಸಲಾಗುತ್ತದೆ. ಇದರಲ್ಲಿ ಒಬ್ಬ ವ್ಯಕ್ತಿಗೆ ಮತ್ತು ಹಿಂದೂ ಅವಿಭಜಿತ ಕುಟುಂಬ(ಎಚ್‌ಯುಎಫ್)ಕ್ಕೆ ವಿಧಿಸಲಾಗಿರುವ ಗರಿಷ್ಠ ಮಿತಿ ನಾಲ್ಕು ಕೆಜಿ ಮತ್ತು ಟ್ರಸ್ಟ್‌ಗಳು ಹಾಗೂ ಸರ್ಕಾರ ಕಾಲಕಾಲಕ್ಕೆ ಅಧಿಸೂಚಿಸಿದ ಆ ರೀತಿಯ ಸಂಸ್ಥೆಗಳಿಗೆ 20 ಕೆಜಿ.

**ಲಿಕ್ವಿಡಿಟಿ:** ಎಸ್‌ಜಿಬಿಗಳಿಗೆ ಮೆಚ್ಯುರಿಟಿ ಅವಧಿ ಎಂಟು ವರ್ಷಗಳು. ಆದರೆ ಐದು ವರ್ಷಗಳ ಬಳಿಕ ಸರ್ಕಾರವು ಮರುಖರೀದಿಯ ವಿಂಡೋವನ್ನು ತೆರೆದಾಗ ಮಾತ್ರ ಎಸ್‌ಜಿಬಿಗಳಿಂದ ನಿರ್ಗಮಿಸಲು ಸಾಧ್ಯ. ಸೆಕೆಂಡರಿ ಮಾರುಕಟ್ಟೆಯಲ್ಲಿ ಈ ಎಸ್‌ಜಿಬಿಗಳನ್ನು ಮಾರಾಟ ಮಾಡಬಹುದು. ಆದರೆ ಹಾಗೆ ಮಾಡುವುದರಿಂದ ಬಂಡವಾಳ ಗಳಿಕೆಯ ತೆರಿಗೆಯನ್ನು ಭರಿಸಬೇಕಾಗುತ್ತದೆ.

**ಆದಾಯ:** ಈ ಬಾಂಡ್‌ಗಳಿಂದ ಬರುವ ಆದಾಯವನ್ನು ಬಡ್ಡಿ ಮತ್ತು ಬಂಡವಾಳ ಗಳಿಕೆ ಎಂದು ಪರಿಗಣಿಸಲಾಗುತ್ತದೆ. ಭೌತಿಕ ಮತ್ತು ಸವರಿನ್ ಗೋಲ್ಡ್ ಬಾಂಡ್‌ಗಳ ಬೆಲೆಗಳಲ್ಲಿ ಯಾವುದೇ ವ್ಯತ್ಯಯ ಇರುವುದಿಲ್ಲ. ಹಾಗಾಗಿ ಇದರಿಂದ ಗಳಿಸಿದ ಆದಾಯದಲ್ಲಿಯೂ ಯಾವುದೇ ವ್ಯತ್ಯಾಸವಿರುವುದಿಲ್ಲ. ಆದರೆ ಎಸ್‌ಜಿಬಿ ಹೂಡಿಕೆದಾರರು ಒಂದು ಹಣಕಾಸು ವರ್ಷದಲ್ಲಿ ಅರೆವಾರ್ಷಿಕವಾಗಿ ಶೇ.2.5 ದರದಲ್ಲಿ ನಿಶ್ಚಿತ ಬಡ್ಡಿಯನ್ನು ಹೆಚ್ಚುವರಿಯಾಗಿ ಪಡೆಯುತ್ತಾರೆ. ಎಲ್ಲಕ್ಕಿಂತ ಮುಖ್ಯವಾಗಿ ಚಿನ್ನದ ಬೆಲೆಯಿಂದ ಬರುವ ಆದಾಯ ಬೇರೆ.

**ತೆರಿಗೆ:** ಬಡ್ಡಿಯಿಂದ ಬಂದ ಆದಾಯ ಮತ್ತು ಬಂಡವಾಳದ ಗಳಿಕೆಯ ಮೇಲೆ ಬೇರೆ ಬೇರೆಯಾಗಿ ತೆರಿಗೆ ಹಾಕಲಾಗುತ್ತದೆ. ಈ ಬಾಂಡ್‌ಗಳಿಂದ ಗಳಿಸಿದ ಬಡ್ಡಿಯ ಆದಾಯವನ್ನು ಹೂಡಿಕೆದಾರರ ಒಟ್ಟು ಆದಾಯಕ್ಕೆ ಸೇರಿಸಲಾಗುತ್ತದೆ. ಬಂಡವಾಳ ಗಳಿಕೆಯಾದರೆ, ಮೂಲ ಬಾಂಡ್‌ನ್ನು ಮುಂಚಿತವಾಗಿಯೇ (ಐದು ವರ್ಷದ ಬಳಿಕ) ಪಡೆದುಕೊಂಡರೆ ಅಥವಾ ಮೆಚ್ಯುರಿಟಿಯ ತನಕ ಕಾಯ್ದಿಟ್ಟುಕೊಂಡರೆ ಗಳಿಸುವ ಬಂಡವಾಳ ಗಳಿಕೆಗೆ ಬಂಡವಾಳ ಗಳಿಕೆಯ ತೆರಿಗೆ ಪಾವತಿ ಮಾಡಬೇಕಾಗಿಲ್ಲ. ಆದರೆ ಸೆಕೆಂಡರಿ ಮಾರುಕಟ್ಟೆಯಲ್ಲಿ ಮಾರಾಟ ಮಾಡಿದ ಯಾವುದೇ ವಹಿವಾಟಿನ ಬಾಂಡ್ ತೆರಿಗೆಗೆ ಅರ್ಹತೆಯನ್ನು ಪಡೆಯುತ್ತದೆ. ಮೂರು ವರ್ಷಗಳ ಬಳಿಕ ಲಾಭದೊಂದಿಗೆ ಈ ಬಾಂಡ್‌ಗಳನ್ನು ಮಾರಾಟ ಮಾಡಿದರೆ ವಿಧಿಸಲಾಗುವ ತೆರಿಗೆ ದರ ಶೇ.20. ಮೂರು ವರ್ಷಗಳಿಗೂ ಮೊದಲು ಮಾರಾಟ ಮಾಡಲಾಗುವ ಬಾಂಡ್ ಮೇಲಿನ ಅಲ್ಪಾವಧಿಯ ಬಂಡವಾಳ ಗಳಿಕೆಯ ತೆರಿಗೆಯನ್ನು ಅಂದಾಜು ಮಾಡಲಾಗುತ್ತದೆ ಮತ್ತು ಈ ತೆರಿಗೆಯನ್ನು ಹೂಡಿಕೆದಾರನ ಆದಾಯಕ್ಕೆ ಸೇರ್ಪಡೆ ಮಾಡಲಾಗುತ್ತದೆ. ಎಸ್‌ಜಿಬಿಗಳಿಗೆ ಟಿಡಿಎಸ್ ಅನ್ವಯವಾಗುವುದಿಲ್ಲ.

**ಅರ್ಹತೆ:** ಭಾರತದ ಯಾವುದೇ ನಿವಾಸಿ –ವ್ಯಕ್ತಿಗಳು, ಟ್ರಸ್ಟ್, ಹಿಂದೂ ಅವಿಭಜಿತ ಕುಟುಂಬಗಳು, ಚಾರಿಟೆಬಲ್ ಸಂಸ್ಥೆಗಳು ಮತ್ತು ವಿಶ್ವವಿದ್ಯಾಲಯಗಳು ಎಸ್‌ಜಿಬಿಗಳಲ್ಲಿ ಹೂಡಿಕೆಯನ್ನು ಮಾಡಬಹುದು. ಅಪ್ರಾಪ್ತರ (ಮೈನರ್) ಪರವಾಗಿಯೂ ಯಾರಾದರೊಬ್ಬರು ಹೂಡಿಕೆ ಮಾಡಬಹುದು. ಇದನ್ನು ಅಭೌತಿಕ ರೂಪದಲ್ಲಿ ನೀಡುವುದರಿಂದ ಹೂಡಿಕೆದಾರರ ಬಳಿ ಡಿಮ್ಯಾಟ್ ಖಾತೆ ಇರಬೇಕು. ಡಿಮ್ಯಾಟ್ ಖಾತೆ ಇಲ್ಲದಿರುವ ಹೂಡಿಕೆದಾರರಿಗೆ ಸರ್ಕಾರವು ಕೆವೈಸಿ ಅಗತ್ಯಗಳಿಗೆ ಆಧಾರವಾಗಿ ಪೇಪರ್ ಸರ್ಟಿಫಿಕೇಟ್ ಆಯ್ಕೆಗಳನ್ನು ನೀಡುತ್ತದೆ.

ಈಗ, ಎಸ್‌ಜಿಬಿಗಳನ್ನು ಖರೀದಿ ಅಥವಾ ಮಾರಾಟ ಮಾಡುವುದು ಹೇಗೆ ಎಂಬ ಬಗ್ಗೆ ಕುತೂಹಲಗೊಂಡಿರಬಹುದು. ಅದನ್ನು ಹೇಗೆ ಎಂಬುದನ್ನು ನೋಡೋಣ.

### ಎಸ್‌ಜಿಬಿಗಳನ್ನು ಖರೀದಿ ಮತ್ತು ಮಾರಾಟ ಮಾಡುವುದು ಹೇಗೆ?

ಹೂಡಿಕೆದಾರರು ಈ ಚಿನ್ನದ ಬಾಂಡ್‌ಗಳನ್ನು ಭೌತಿಕ, ಡಿಜಿಟಲ್ ಅಥವಾ ಅಭೌತಿಕ ರೂಪದಲ್ಲಿ ಖರೀದಿ ಮಾಡುವ ಆಯ್ಕೆಯನ್ನು ಹೊಂದಿರುತ್ತಾರೆ. ಆನ್‌ಲೈನ್ ಮತ್ತು ಆಫ್‌ಲೈನ್ ಖರೀದಿಯನ್ನು ನಿಯೋಜಿತ ಅಂಚೆ ಕಚೇರಿ, ಸ್ಟಾಕ್ ಎಕ್ಸ್‌ಚೇಂಜ್ (ಎನ್‌ಎಸ್‌ಇ ಅಥವಾ ಬಿಎಸ್‌ಇ) ಅಥವಾ ಶೆಡ್ಯುಲ್ ಬ್ಯಾಂಕ್‌ಗಳ ಮೂಲಕ ಮಾಡಬಹುದಾಗಿದೆ.



**ಎಸ್‌ಜಿಬಿ ಹೂಡಿಕೆದಾರರು ಒಂದು ಹಣಕಾಸು ವರ್ಷದಲ್ಲಿ ಅರೆವಾರ್ಷಿಕವಾಗಿ ಶೇ.2.5 ದರದಲ್ಲಿ ನಿಶ್ಚಿತ ಬಡ್ಡಿಯನ್ನು ಹೆಚ್ಚುವರಿಯಾಗಿ ಪಡೆಯುತ್ತಾರೆ.**

ಆನ್‌ಲೈನ್ ಮೂಲಕ ಪಾವತಿ ಮಾಡುವ ಹೂಡಿಕೆದಾರರಿಗೆ ಪ್ರತಿ ಗ್ರಾಮ್ ಮೇಲೆ 50 ರೂ. ರಿಯಾಯ್ತಿ ನೀಡಲಾಗುತ್ತದೆ.


ಹೂಡಿಕೆದಾರರಿಗೆ ಎಂಟು ವರ್ಷಗಳ ಮೆಚ್ಯುರಿಟಿಯ ಬಗ್ಗೆ ಒಂದು ತಿಂಗಳ ಮೊದಲು ಮಾಹಿತಿ ನೀಡಲಾಗುತ್ತದೆ ಮತ್ತು ಮೆಚ್ಯುರಿಟಿ ದಿನ ಲಭ್ಯವಿರುವ ದಾಖಲೆಗಳ ಆಧಾರದಲ್ಲಿ ಬ್ಯಾಂಕ್ ಖಾತೆಗೆ ಹಣವನ್ನು ಪಾವತಿ ಮಾಡಲಾಗುತ್ತದೆ. ಈ ಮೊದಲೇ ಹೇಳಿದಂತೆ ಬಾಂಡ್ ನೀಡಿದ ದಿನಾಂಕದಿಂದ ಐದು ವರ್ಷಗಳ ಬಳಿಕ ಮುಂಚಿತವಾಗಿ ನಗದೀಕರಣ ಮಾಡಲು ಅವಕಾಶವಿರುತ್ತದೆ. ಡಿಮ್ಯಾಟ್ ಸ್ವರೂಪದಲ್ಲಿದ್ದರೆ ಬಾಂಡ್‌ಗಳನ್ನು ಎಕ್ಸ್‌ಚೇಂಜ್‌ನಲ್ಲಿ ವ್ಯಾಪಾರ ಮಾಡಬಹುದಾಗಿದೆ. ಇದನ್ನು ಇನ್ನಿತರ ಯಾವುದೇ ಅರ್ಹ ಹೂಡಿಕೆದಾರರಿಗೆ ವರ್ಗಾವಣೆ ಕೂಡ ಮಾಡಬಹುದು.

**ಎಸ್‌ಜಿಬಿಯ ಪ್ರಯೋಜನಗಳು:** ಒಟ್ಟಾರೆಯಾಗಿ ಎಸ್‌ಜಿಬಿಗಳು ಭಾರತದಲ್ಲಿ ಹೂಡಿಕೆದಾರರಿಗೆ ಅನೇಕ ಪ್ರಯೋಜನಗಳನ್ನು ಒದಗಿಸುತ್ತಿದೆ. ಇದರಲ್ಲಿ ಗುಣಮಟ್ಟದ ಬಗ್ಗೆ ಯಾವುದೇ ರಿಸ್ಕ್ ಇಲ್ಲದಿರುವುದು, ಸಂಗ್ರಹಕ್ಕೆ ಯಾವುದೇ ವೆಚ್ಚ ಭರಿಸಬೇಕಾಗಿಲ್ಲ, ತಯಾರಿಕೆ ಶುಲ್ಕಗಳಿಲ್ಲ, ಅಧಿಕ ಲಿಕ್ವಿಡಿಟಿ, ಬಡ್ಡಿ ಗಳಿಕೆಯ ಖಾತರಿ, ತೆರಿಗೆ ಪ್ರಯೋಜನಗಳು ಮತ್ತು ಅನುಕೂಲಕರ. ಇದು ಸಾಲಗಳಿಗೆ ಮೇಲಾಧಾರವಾಗಿ ಪರಿಗಣಿಸಬಹುದು. ಆಸ್ತಿಯ ವೈವಿಧ್ಯೀಕರಣಕ್ಕೆ ಹೂಡಿಕೆ ಮಾರ್ಗವನ್ನು ನೋಡುತ್ತಿದ್ದರೆ ಚಿನ್ನದ ಬಾಂಡ್ ಅಪ್ಪಟ ಚಿನ್ನದಷ್ಟೇ ಉತ್ತಮ. ಈ ವಿಷಯದಲ್ಲಿ ನಿಮಗೆ ಆಸಕ್ತಿ ಇದ್ದುದೇ ಆಗಿದ್ದರೆ ಮುಂದಿನ ಉತ್ಪನ್ನದ ಘೋಷಣೆಯನ್ನು ನಿರೀಕ್ಷಿಸಿ. ಅಲ್ಲಿಯ ತನಕ ಇಂತಹುದೊಂದು ಉತ್ತಮ ಯೋಜನೆಯನ್ನು ನಿಮ್ಮ ಸಂಗಾತಿ ಮತ್ತು ಗೆಳೆಯರ ಬಳಿ ಹಂಚಿಕೊಳ್ಳಲು ಮರೆಯಬೇಡಿ.

# ಅಪಘಾತ ವಿಮೆ

## ಹೀಗಿರಲಿ ಪಾಲಿಸಿ





ಆರೋಗ್ಯ ವಿಮಾ ಪಾಲಿಸಿಯನ್ನು ಹೊಂದಿದ್ದವರಿಗೆ ವೈಯಕ್ತಿಕ ಅಪಘಾತ ವಿಮಾ ಪಾಲಿಸಿಯ ಅಗತ್ಯವಿಲ್ಲವೇ? ಸಾಮಾನ್ಯವಾಗಿ ಜನ ಅದರ ಅಗತ್ಯವಿಲ್ಲ ಎಂದು ಭಾವಿಸುತ್ತಾರೆ. ಅಪಘಾತ ಸಂಭವಿಸಿದರೆ ಆರೋಗ್ಯ ವಿಮಾ ಪಾಲಿಸಿಯಲ್ಲಿಯೆ ಆಸ್ಪತ್ರೆಗೆ ದಾಖಲಾಗುವುದಕ್ಕೆ ಸಂಬಂಧಿಸಿದ ವೆಚ್ಚಗಳು ಕೂಡ ಕವರ್ ಆಗುತ್ತದೆ ಎಂಬ ಕಲ್ಪನೆ ಜನರಲ್ಲಿ ಇರುತ್ತದೆ. ಒಂದು ಮಟ್ಟಿಗೆ ಈ ಕಲ್ಪನೆ ನಿಜವಾದರೂ ಕೂಡ ಅಪಘಾತಗಳಿಂದ ಸಂಭವಿಸಿದ ಎಲ್ಲ ನಷ್ಟಗಳನ್ನೂ ಆರೋಗ್ಯ ವಿಮೆಯಲ್ಲಿ ಕವರ್ ಮಾಡಲಾಗುವುದಿಲ್ಲ.

ಅಪಘಾತದಿಂದ ಉಂಟಾಗುವ ಆದಾಯದ ನಷ್ಟ, ಮಕ್ಕಳ ಶಿಕ್ಷಣ, ಸಾಲದ ಭದ್ರತೆ ಮುಂತಾದ ಅನೇಕ ನಷ್ಟಗಳನ್ನು ವೈಯಕ್ತಿಕ ಅಪಘಾತ ವಿಮೆಯಿಂದ ತುಂಬಿಕೊಡಲು ಸಹಾಯ ಮಾಡುತ್ತದೆ. ಇದು ಆರೋಗ್ಯ ವಿಮೆ ಮತ್ತು ಇತರ ವಿಮಾ ಪಾಲಿಸಿಗಳಿಂದ ಸಾಧ್ಯವಾಗುವುದಿಲ್ಲ.

ಅಪಘಾತದಿಂದ ಯಾವುದೇ ರೀತಿಯಲ್ಲಿ ಗಾಯ ಅಥವಾ ಅಂಗವಿಕಲತೆ ಉಂಟಾದರೆ ಅದರಿಂದ ನಿಮ್ಮ ಕುಟುಂಬಕ್ಕೆ ನಿರಂತರ ಭದ್ರತೆ ವೈಯಕ್ತಿಕ ವಿಮಾ ಪಾಲಿಸಿಯಿಂದ ಸಾಧ್ಯವಾಗುತ್ತದೆ. ಇಂತಹುದೊಂದು ವಿಮೆ ಅಪಘಾತದಿಂದ ಸಂಭವಿಸುವ ಸಾವು, ಶಾಶ್ವತ ಪೂರ್ಣ ಅಂಗವಿಕಲತೆ ಮತ್ತು ಶಾಶ್ವತ ಭಾಗಶಃ ಅಂಗವಿಕಲತೆಯ ವಿಷಯದಲ್ಲಿ ಭದ್ರತೆಯನ್ನು ಒದಗಿಸುತ್ತದೆ. ಇದರಲ್ಲಿ ಐಚ್ಛಿಕವಾಗಿ ಆಯ್ಕೆ ಮಾಡುವ ಆ್ಯಡ್ ಆನ್ ಅಂಶಗಳು ಕೂಡ ಇವೆ. ಈ ಪಾಲಿಸಿಯ ಅಡಿಯಲ್ಲಿ ಬರುವ ಹೆಚ್ಚುವರಿ ಪ್ರಯೋಜನಗಳಲ್ಲಿ ಕೆಲವನ್ನು ಇಲ್ಲಿ ಗಮನಿಸೋಣ.

**ಎ. ಆದಾಯ ನಷ್ಟ:** ಅಪಘಾತದ ಬಳಿಕ ಅನೇಕ ರೀತಿಯ ಖರ್ಚುಗಳು ಉಂಟಾಗುವುದರಿಂದ ಆದಾಯದಲ್ಲಿ ಆಗುವ ಯಾವುದೇ ನಷ್ಟವನ್ನು ಭರಿಸುವುದು ಕಷ್ಟವಾಗುತ್ತದೆ. ಇಂತಹ ಒಂದು ಆ್ಯಡ್ ಆನ್‌ಗಳು ಆದಾಯದಲ್ಲಿ ಉಂಟಾಗುವ ನಷ್ಟವನ್ನು ಭರ್ತಿ ಮಾಡಿಕೊಡುತ್ತದೆ. ವಿಮೆಯನ್ನು ಹೊಂದಿದ ವ್ಯಕ್ತಿ ಕೆಲಸ ಮಾಡಲು ಅಸಮರ್ಥನಾಗಿರುವ ತನಕ ವಾರಕ್ಕೊಮ್ಮೆ ನಿರ್ದಿಷ್ಟ ಹಣವನ್ನು ಪಾವತಿ ಮಾಡಲಾಗುತ್ತದೆ. ಉದಾಹರಣೆಗೆ, ಆ್ಯಡ್ ಆನ್ ಸೌಲಭ್ಯವು ಪ್ರತಿ ವಾರಕ್ಕೆ 25,000 ತನಕ ಖರ್ಚನ್ನು ಭರಿಸುತ್ತದೆ. ಅಪಘಾತದ ಕಾರಣದಿಂದ ವಿಮೆಯನ್ನು ಪಡೆದ ವ್ಯಕ್ತಿ ಕೆಲಸ ಮಾಡಲು ಅಸಮರ್ಥನಾದರೆ ಈ ಆ್ಯಡ್ ಆನ್ ಅಡಿಯಲ್ಲಿ 50,000 ರೂ. ಪಡೆಯಲು ಅರ್ಹತೆಯನ್ನು ಪಡೆಯುತ್ತಾರೆ.

**ಬಿ. ಮೂಳೆಮುರಿತದ ಸೌಲಭ್ಯ:** ಸಾಮಾನ್ಯವಾಗಿ ಮೂಳೆ ಮುರಿತಕ್ಕೆ ಸಂಬಂಧಿಸಿದ ಸೌಲಭ್ಯಗಳನ್ನು ಆರೋಗ್ಯ ವಿಮಾ ಪಾಲಿಸಿಗಳಿಂದ ಹೊರಗಿಡಲಾಗುತ್ತದೆ. ವೈಯಕ್ತಿಕ ಅಪಘಾತ ವಿಮೆಯಲ್ಲಿ ಇದನ್ನು ಹೆಚ್ಚುವರಿ ಪ್ರಯೋಜನವಾಗಿ ಒದಗಿಸಲಾಗುತ್ತದೆ. ಈ ಆ್ಯಡ್-ಆನ್ ಅಡಿಯಲ್ಲಿ ಮೂಳೆ ಮುರಿತದ ತೀವ್ರತೆಗೆ ಅನುಗುಣವಾಗಿ ಕ್ಲೈಮ್‌ನ್ನು ಪಡೆಯಲಾಗುತ್ತದೆ. ಉದಾಹರಣೆಗೆ ಮೂಳೆ ಮುರಿತದ ಸೌಲಭ್ಯ ಒಂದು ಲಕ್ಷ ರೂ. ಇದ್ದರೆ ವಿಮೆಯನ್ನು ಪಡೆದವನು ಸಾಮಾನ್ಯ ಮೂಳೆ ಮುರಿತಕ್ಕೆ ಒಳಗಾಗಿದ್ದರೆ ಈ ಆ್ಯಡ್-ಆನ್ ಅಡಿಯಲ್ಲಿ 25 ಸಾವಿರ ಮೊತ್ತವನ್ನು ಪಡೆಯಬಹುದು.

**ಸಿ. ಸಾಲ ಸುರಕ್ಷತಾ ಸೌಲಭ್ಯ:** ಅಪಘಾತದ ಸಮಯದಲ್ಲಿ ಸಾಲದ ಸುಸ್ತಿದಾರರಾಗಿರುವುದು ತೀರಾ ಪ್ರತಿಕೂಲ ಪರಿಣಾಮವನ್ನು ಉಂಟುಮಾಡುತ್ತದೆ. ಜೊತೆಗೆ ಅಪಘಾತದಿಂದ ಸಾವು ಸಂಭವಿಸಿದ್ದರೆ ಪರಿಸ್ಥಿತಿ ಇನ್ನಷ್ಟು ವಿಕೋಪಕ್ಕೆ ಹೋಗುತ್ತದೆ. ಈ ಅಪಘಾತದಿಂದ ವಿಮೆಯನ್ನು ಪಡೆದವನ ಕುಟುಂಬ ಹಣಕಾಸು ಮತ್ತು ಭಾವನಾತ್ಮಕ ನಷ್ಟಕ್ಕೂ ಒಳಗಾಗಬೇಕಾಗುತ್ತದೆ. ಅದಕ್ಕಾಗಿ ಸಾಲ ಸುರಕ್ಷತಾ ಸೌಲಭ್ಯವನ್ನು ಆ್ಯಡ್-ಆನ್ ಮಾಡುವುದರಿಂದ ಹಠಾತ್ ಸಾವು ಅಥವಾ ಪೂರ್ಣ ಅಂಗವಿಕಲತೆ ಉಂಟಾದರೆ ಹಣಕಾಸು ಸುರಕ್ಷತೆ ದೊರೆಯುತ್ತದೆ.

**ಡಿ. ಸುಟ್ಟ ಗಾಯಗಳು:** ಅಗ್ನಿ ಅವಘಡ ಅಥವಾ ಯಾವುದೇ ರಾಸಾಯನಿಕದಿಂದ ಮತ್ತು ಅಂತಹ ಸುಟ್ಟ ಗಾಯಗಳಿಗೆ ಒಳಗಾದರೆ ಮತ್ತು ಸಾವನ್ನಪ್ಪಿದರೆ ಈ ಸೌಲಭ್ಯ ದೊರೆಯುತ್ತದೆ. ಹಾಗಾಗಿ ಇಲ್ಲಿ ಆ್ಯಡ್-ಆನ್ ಸೇರ್ಪಡೆ ಮಾಡಿದರೆ ಪಾಲಿಸಿದಾರನಿಗೆ ನಿರ್ದಿಷ್ಟ ಮೊತ್ತವನ್ನು ನೀಡಲಾಗುತ್ತದೆ.

**ಇ. ಇತರ ಆ್ಯಡ್-ಆನ್‌ಗಳು:** ಮೂರ್ಛೆ ತಪ್ಪುವುದಕ್ಕೆ ಸಂಬಂಧಿಸಿದ

ಸೌಲಭ್ಯಗಳು, ಏರ್ ಅಂಬ್ಯುಲೆನ್ಸ್, ವೀಲ್‌ಚೇರ್ ಅಥವಾ ಊರುಗೋಲಿನ ವೆಚ್ಚಗಳು, ಕೃತಕ ಕಾಲಿನ ವೆಚ್ಚಗಳು ಅಥವಾ ಮಗುವಿನ ಟ್ಯೂಷನ್ ಪ್ರಯೋಜನದಂತಹ ಇನ್ನಿತರ ಆ್ಯಡ್-ಆನ್‌ಗಳು ವೈಯಕ್ತಿಕ ಅಪಘಾತ ವಿಮಾ ಸೌಲಭ್ಯದಲ್ಲಿ ಲಭ್ಯ.

ಈ ಅನುಕೂಲತೆಗಳ ಜೊತೆಗೆ ಕ್ಲೈಮ್ ಮಾಡದೇ ಇರುವ ಬೋನಸ್ (ಅಂದಾಜು ಶೇ.10ರಿಂದ 20)ನಿಂದಾಗಿ ನಿಮ್ಮ ವಿಮೆ ಸೌಲಭ್ಯದಲ್ಲಿ ಏರಿಕೆಯಾಗಬಹುದು. ಇಂತಹ ಅನೇಕ ರಿಸ್ಕ್‌ಗಳನ್ನು ಒಳಗೊಳ್ಳುವುದರಿಂದ ಮತ್ತು ಅನೇಕ ಪ್ರಯೋಜನಗಳನ್ನು ಒದಗಿಸುವುದರಿಂದ ಈ ವಿಮೆಯನ್ನು ಖರೀದಿ ಮಾಡುವುದು ದುಬಾರಿಯಾಗಬಹುದು ಎಂದು ಬಹುತೇಕರು ಯೋಚನೆ ಮಾಡಬಹುದು. ಅದೃಷ್ಟವಶಾತ್ ಪ್ರೀಮಿಯಂಗಳು ಕೈಗೆಟಕುವಂತಿವೆ. ಇದನ್ನು ನಾವು ಈ ಕೆಳಗಿನ ಉದಾಹರಣೆಗಳೊಂದಿಗೆ ನೋಡಬಹುದು:

ರಾಜೇಂದ್ರ ಅವರು 50 ಲಕ್ಷ ರೂ. ವೈಯಕ್ತಿಕ ಅಪಘಾತ ವಿಮಾ ಸೌಲಭ್ಯವನ್ನು ಹೊಂದಿದ್ದಾರೆ. ಜೊತೆಗೆ ಅವರ ಇಬ್ಬರು ಮಕ್ಕಳು ತಲಾ ಹತ್ತು ಲಕ್ಷ ರೂ. ಹಾಗೂ ಪತ್ನಿ 25 ಲಕ್ಷ ರೂ. ಸೌಲಭ್ಯವನ್ನು ಪಡೆದಿದ್ದಾರೆ. ರಾಜೇಂದ್ರ ಅವರು ಪ್ರತಿ ವಾರಕ್ಕೆ ತಮಗಾಗಿ 50000 ರೂ. ಟಿಟಿಡಿ (ತಾತ್ಕಾಲಿಕ ಸಂಪೂರ್ಣ ಅಂಗವಿಕಲತೆ) ಹಾಗೂ ತಮ್ಮ ಪತ್ನಿಗೆ 10000 ರೂ. ಆಯ್ಕೆ ಮಾಡಿಕೊಳ್ಳಲು ನಿರ್ಧರಿಸಿದರು. ಜೊತೆಗೆ 10 ಲಕ್ಷ ರೂ. ಮೂಳೆ ಮುರಿತದ ಸೌಲಭ್ಯವನ್ನು ಕೂಡ ಸೇರ್ಪಡೆ ಮಾಡಿದರು. ಅವರು ವಾರ್ಷಿಕ ಪ್ರಿಮೀಯಂ ಆಗಿ 21,231 ರೂ. ಪಾವತಿ ಮಾಡುತ್ತಾರೆ.

ಈಗ ರಾಜೇಂದ್ರ ಅವರು ಮೆಟ್ಟಿಲುಗಳಿಂದ ಬಿದ್ದು ಮೂಳೆ ಮುರಿತಕ್ಕೆ ಒಳಗಾಗಿದ್ದರೆ ಏನಾಗುತ್ತದೆ ಎಂಬುದನ್ನು ನೋಡೋಣ. ವೈದ್ಯರು 28 ದಿನಗಳ ವಿಶ್ರಾಂತಿ ಪಡೆಯುವಂತೆ ರಾಜೇಂದ್ರನಿಗೆ ಸಲಹೆ ನೀಡುತ್ತಾರೆ. ಇಂತಹ ಸಂದರ್ಭದಲ್ಲಿ ವೈಯಕ್ತಿಕ ವಿಮಾ ಪಾಲಿಸಿಯಿಂದ ಈ ಕೆಳಗಿನ ಕ್ಲೈಮ್‌ನ್ನು ಪಡೆಯಲು ಅವರು ಅರ್ಹತೆಯನ್ನು ಪಡೆಯುತ್ತಾರೆ.

| | | | |
|---|---|---|---|
| ಸೌಲಭ್ಯ | ಮೂಳೆ ಮುರಿತ ಸೌಲಭ್ಯ (10 ಲಕ್ಷ ರೂ.) | ಎಸ್‌ಐನ ಶೇ.5ಕ್ಕೆ 1 ಮೂಳೆ ಮುರಿತ ಸೌಲಭ್ಯ ಪಾವತಿ | 50,000 |
| ಲೆಕ್ಕಾಚಾರ | ಆದಾಯದಲ್ಲಿನ ನಷ್ಟ | 4 ವಾರಗಳಿಗೆ ಪ್ರತಿ ವಾರ ರೂ.50000. | 2,00,000 |
| ಕ್ಲೈಮ್ ಮೊತ್ತ (ರೂ.) | | ಒಟ್ಟು ಪಾವತಿ | 2,50,000 |

**ಅಪಘಾತದಿಂದ ಯಾವುದೇ ರೀತಿಯಲ್ಲಿ ಗಾಯ ಅಥವಾ ಅಂಗವಿಕಲತೆ ಉಂಟಾದರೆ ಅದರಿಂದ ನಿಮ್ಮ ಕುಟುಂಬಕ್ಕೆ ನಿರಂತರ ಭದ್ರತೆ ವೈಯಕ್ತಿಕ ವಿಮಾ ಪಾಲಿಸಿಯಿಂದ ಸಾಧ್ಯವಾಗುತ್ತದೆ.**

ಈ ವಿಮಾ ಸೌಲಭ್ಯಗಳ ಪ್ರೀಮಿಯಂಗಳು ವಿಮೆಯನ್ನು ಪಡೆದ ವ್ಯಕ್ತಿಯ ವೃತ್ತಿಯ ಆಧಾರದ ಮೇಲೆ ನಿರ್ಧಾರವಾಗುತ್ತದೆ. ಪಾಲಿಸಿದಾರನ ಉದ್ಯೋಗವು ಅತ್ಯಂತ ಅಪಾಯದಿಂದ ಕೂಡಿದ್ದರೆ ಪ್ರೀಮಿಯಂ ಮೊತ್ತ ಕೂಡ ಹೆಚ್ಚಾಗಿರುತ್ತದೆ. ಆರೋಗ್ಯ ವಿಮೆಯಲ್ಲಿ ಇರುವಂತೆ ವಯಸ್ಸು ಅಥವಾ ನಗರ ಬದಲಾದಂತೆ ಪ್ರೀಮಿಯಂ ಬದಲಾಗುವುದಿಲ್ಲ. ಉದಾಹರಣೆಗೆ ಕಾರ್ಮಿಕನೊಬ್ಬನಿಗೆ ಹೋಲಿಸಿದರೆ ವೈದ್ಯರು ಕಡಿಮೆ ಅಪಘಾತದ ರಿಸ್ಕ್‌ಗೆ ಒಳಗಾಗುತ್ತಾರೆ. ಹಾಗಾಗಿ ಕೂಲಿ ಕಾರ್ಮಿಕನಿಗೆ ಹೆಚ್ಚು ಪ್ರೀಮಿಯಂ ಇದ್ದರೆ ಡಾಕ್ಟರ್‌ಗೆ ಕಡಿಮೆ ಪ್ರೀಮಿಯಂ ಇರುತ್ತದೆ. ಈ ಕಾರಣಕ್ಕೆ ಪಾಲಿಸಿಯನ್ನು ಅಪಾಯದ ವರ್ಗ-1, ಅಪಾಯದ ವರ್ಗ-2 ಹೀಗೆ ಅಪಾಯದ ಆಧಾರದಲ್ಲಿ ಪಾಲಿಸಿಯನ್ನು ವಿಭಾಗಿಸಲಾಗುತ್ತದೆ. 18ರಿಂದ 69ನೇ ವಯಸ್ಸಿನವರೆಗೆ ಪ್ರೀಮಿಯಂ ಒಂದೇ ಆಗಿರುತ್ತದೆ. ಬದಲಾಗಿ ವೃತ್ತಿಯನ್ನು ಆಧರಿಸಿ ಪ್ರೀಮಿಯಂನಲ್ಲಿ ವ್ಯತ್ಯಯ ಉಂಟಾಗುತ್ತದೆ.

ಒಬ್ಬ ವ್ಯಕ್ತಿಯ ವಾರ್ಷಿಕ ಅಥವಾ ಮಾಸಿಕ ಆದಾಯಕ್ಕೆ ತಕ್ಕಂತೆ ಆತನ ವೈಯಕ್ತಿಕ ಅಪಘಾತ ವಿಮಾ ಸೌಲಭ್ಯವಿರುತ್ತದೆ. ಉದಾಹರಣೆಗೆ, ವೇತನದಾರರಿಗೆ ವಾರ್ಷಿಕ ಆದಾಯದ ಹತ್ತು ಪಟ್ಟು ಮತ್ತು ಸ್ವಉದ್ಯೋಗಿಗಳಿಗೆ 20 ಪಟ್ಟು ಇರುತ್ತದೆ. ಅದೇ ರೀತಿ, ಪಾಲಿಸಿಯನ್ನು ಖರೀದಿ ಮಾಡುವ ಸಂದರ್ಭದಲ್ಲಿ ಅಥವಾ ಕ್ಲೈಮ್ ಭರ್ತಿ ಮಾಡುವ ವೇಳೆ ವಿಮಾ ಕಂಪನಿಗಳು ಐಟಿ ಸಲ್ಲಿಕೆ ಅಥವಾ ನಮೂನೆ 16ರಂತಹ ಪುರಾವೆ ದಾಖಲೆಗಳನ್ನು ಕೇಳಬಹುದು.

ಕೊನೆಯ ಮಾತು: ಅನೇಕ ಅಪಘಾತದ ರಿಸ್ಕ್‌ಗಳ ಸೌಲಭ್ಯವನ್ನು ಪಡೆಯಲು ವೈಯಕ್ತಿಕ ಅಪಘಾತ ವಿಮಾ ಪಾಲಿಸಿಯನ್ನು ಪಡೆಯುವುದು ಉತ್ತಮ ಆಯ್ಕೆ. ಇಂತಹ ಅಪಾಯಗಳಿಂದ ಮಧ್ಯಮದಿಂದ ಭಾರಿ ನಷ್ಟಗಳು ಸಂಭವಿಸಬಹುದು. ವಾಸ್ತವವಾಗಿ ಇತರರು ಮಾಡುವ ತಪ್ಪುಗಳು ಕೂಡ ನಮ್ಮ ಅನಿಶ್ಚಿತತೆಗೆ ಕಾರಣವಾಗಬಹುದು. ಹಾಗಾಗಿ ಇಂತಹ ಅಪಘಾತದಿಂದ ಉಂಟಾಗಬಹುದಾದ ಯಾವುದೇ ವೆಚ್ಚಗಳು ಅಥವಾ ನಷ್ಟಗಳ ಬಗ್ಗೆ ಯಾವತ್ತೂ ಎಚ್ಚರಿಕೆಯಿಂದ ಇರುವುದು ಉತ್ತಮ.


## ಇನ್‌ಸ್ಪೈರ್ ಇಂಡಿಯಾ ವೆಲ್ತ್ ಪ್ರೈವೇಟ್ ಲಿ.

(ARN-79020)

ಎಎಂಎಫ್ಐ ನೋಂದಾಯಿತ ಮ್ಯೂಚುಯಲ್ ಫಂಡ್ ವಿತರಕರು

ನಮ್ಮ ಸಂಪರ್ಕ: 9148319207, 080-42129917

Mail: info@inspireindiafs.com


**ನಮ್ಮ ಸೇವೆಗಳು**

1. ಮ್ಯೂಚುಯಲ್ ಫಂಡ್ಸ್
2. ಸ್ಟಾಕ್ ಬ್ರೋಕಿಂಗ್
3. ಫೈನಾನ್ಷಿಯಲ್ ಕನ್ಸಲ್ಟಿಂಗ್ & ಪ್ಲಾನಿಂಗ್
4. ಪ್ರಾಪರ್ಟಿ ಇನ್ವೆಸ್ಟ್‌ಮೆಂಟ್
5. ತೆರಿಗೆ ಉಳಿತಾಯ ಬಾಂಡ್‌ಗಳು
6. ವಿಮೆ
7. ವೆಲ್ತ್ ಮ್ಯಾನೇಜ್‌ಮೆಂಟ್
8. ಹಣಕಾಸು ಮೌಲ್ಯಮಾಪನ
9. ತೆರಿಗೆ ಸಲ್ಲಿಕೆ
10. ವಿಲ್ ಬರವಣಿಗೆ


ವಿಳಾಸ : INSPIRE INDIA WEALTH PVT LTD

@ 65, 'Surasa Enclave', 1st Floor, Puttanna Road, Gandhi Bazar, Basavanagudi, Bengaluru-560004



**ಡಿಸ್ಕ್ಲೈಮರ್**

ಈ ವಾರ್ತಾಪತ್ರದ ಸಂಕಲನ ಮಾಡುವ ಸಂದರ್ಭದಲ್ಲಿ ನಾವು ಎಲ್ಲ ರೀತಿಯ ಕಾಳಜಿ ಮತ್ತು ಎಚ್ಚರಿಕೆಯನ್ನು ವಹಿಸಿರುತ್ತೇವೆ. ಇಲ್ಲಿನ ಮಾಹಿತಿಗಳನ್ನು ಹಲವು ನಂಬಿಕೆಗೆ ಅರ್ಹವಾದ ಮೂಲಗಳಿಂದ ಪಡೆದಿರುತ್ತೇವೆ. ಆದರೆ, ಯಾವುದೇ ಮಾಹಿತಿಯ ಖಚಿತತೆ, ಅರ್ಹತೆ ಅಥವಾ ಪರಿಪೂರ್ಣತೆಯ ಬಗ್ಗೆ ಖಾತರಿಯನ್ನು ನೀಡುವುದಿಲ್ಲ. ಹಾಗಾಗಿ ಇಂತಹ ಮಾಹಿತಿ ಬಳಕೆಯಿಂದ ಆಗಬಹುದಾದ ಯಾವುದೇ ದೋಷ ಅಥವಾ ಲೋಪಗಳಿಗೆ ಜವಾಬ್ದಾರರಾಗಿರುವುದಿಲ್ಲ. ಈ ವಾರ್ತಾಪತ್ರದಲ್ಲಿ ತಿಳಿಸಲಾದ, ಚರ್ಚಿಸಲಾದ ಅಥವಾ ಶಿಫಾರಸ್ಸು ಮಾಡಲಾದ ಯಾವುದೇ ಯೋಜನೆಗಳಿಗೆ ಸಂಬಂಧಿಸಿದಂತೆ ಹೂಡಿಕೆಯನ್ನು ಮಾಡುವ ಸಮರ್ಪಕತೆಯ ಬಗ್ಗೆ ಹೂಡಿಕೆದಾರರು ಸೂಕ್ತವಾದ ಹಣಕಾಸು ಸಲಹೆಗಳನ್ನು ಪಡೆಯಬೇಕು ಮತ್ತು ಭವಿಷ್ಯದ ನಿರೀಕ್ಷೆಗಳ ಬಗ್ಗೆ ನೀಡಿರುವ ಹೇಳಿಕೆಗಳು ಕಾರ್ಯರೂಪಕ್ಕೆ ಬರಬಹುದು ಅಥವಾ ಬಾರದೇ ಇರಬಹುದು ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು. ಮ್ಯೂಚುಯಲ್ ಫಂಡ್ ಹೂಡಿಕೆಗಳು ಯಾವತ್ತೂ ಮಾರುಕಟ್ಟೆಗೆ ಸಂಬಂಧಿಸಿದ ಅಪಾಯದ ವ್ಯಾಪ್ತಿಗೆ ಒಳಪಟ್ಟಿರುತ್ತವೆ. ಹಾಗಾಗಿ ಹೂಡಿಕೆಯನ್ನು ಮಾಡುವುದಕ್ಕೂ ಮುನ್ನ ನಿಮಗೆ ನೀಡಲಾದ ದಾಖಲೆಗಳನ್ನು ದಯವಿಟ್ಟು ಅತ್ಯಂತ ಎಚ್ಚರಿಕೆಯಿಂದ ಓದಿಕೊಳ್ಳಿ. ಹಿಂದಿನ ನಿರ್ವಹಣೆಯ ಕೇವಲ ಸೂಚಕ ಉದ್ದೇಶವನ್ನು ಹೊಂದಿದ್ದು ಅದು ಯಾವುದೇ ಕಾರಣಕ್ಕೂ ಭವಿಷ್ಯದ ಮಾರ್ಗದರ್ಶಕವಾಗಿರುವುದಿಲ್ಲ ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು.


**"ಅತ್ಯಂತ ಉದ್ಯಮಶೀಲತಾ ಚಿಂತನೆಗಳೆಲ್ಲ ಆರಂಭದಲ್ಲಿ ಮೂರ್ಖತನದ, ಅತ್ಯುತ್ಸಾಹದ ಮತ್ತು ಲಾಭಕರವಲ್ಲದ್ದು ಅನಿಸಿಬಿಡುತ್ತದೆ. ಕೊನೆಗೆ ಅವೆಲ್ಲವೂ ಅತ್ಯಂತ ಸಮರ್ಪಕ ಅನಿಸುತ್ತ ಹೋಗುತ್ತವೆ"**